## ಒಂದೇ ಗುಣ!

ವರನ ಕಡೆಯವರು ವಧು ನೋಡಲು ಹೋದರು. ಪುರೋಹಿತರು ಹುಡುಗ ಹುಡುಗಿಯ ಜಾತಕಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಹೇಳಿದರು, '36ಕ್ಕೆ 36 ಗುಣಗಳು ಹೊಂದುತ್ತವೆ'.

ಹಾಗಾದರೆ ಈ ಮದುವೆ ಸಾಧ್ಯವಿಲ್ಲ ಎನ್ನುತ್ತಾ. ಹುಡುಗನ ಕಡೆಯವರು ಎದ್ದು ಹೊರಡಲನುವಾದರು. ಆಗ ಹುಡುಗಿಯ ಅಪ್ಪ ವಿಚಾರಿಸಿದರು,'ಏನಾಯಿತು ಸ್ವಾಮಿ? ಎಲ್ಲಾ ಗುಣಗಳೂ ಹೊಂದುತ್ತವೆ; ಇದಕ್ಕಿಂತ ಒಳ್ಳೆಯ ಜೋಡಿ ಇನ್ನೆಲ್ಲಿ ಸಿಗುತ್ತದೆ?'

ಹುಡುಗನ ಅಪ್ಪ ಥಟ್ಟನೆ ಉತ್ತರಿಸಿದರು, 'ನಮ್ಮ ಪುತ್ರನೇನೋ ನಾಲಾಯಕ್ ಇದ್ದಾನೆ; ಈಗ ಸೊಸೆಯನ್ನೂ ಅಂಥವಳನ್ನೇ ತರಲೇ!'

**ರಮಣ್ ಶೆಟ್ಟಿ ರೆಂಜಾಳ್**



---



## ನಾನೇ ಮಾಡಿಸಿದ್ದು!

ನಮ್ಮ ಪಕ್ಕದ ಮನೆಯವನಿಗೊಂದು ಚಾಳಿ. ಏನೇ ಹೇಳಿದರೂ ತಾನೂ ಮಾಡಿದ್ದೇನೆ ಅಥವಾ ಮಾಡಿಸಿದ್ದೇನೆ ಅನ್ನುವುದು. ಊರಲ್ಲಿ ಏನೇ ಕಾರ್ಯ ಜರುಗಲಿ, ಅಲ್ಲೂ ತನ್ನದೊಂದು ಇರಲಿ ಎಂಬಂತೆ ವರ್ತಿಸುವುದು. ಯಾರೋ ತಮ್ಮ ಮನೆಯ ತೋಟದಲ್ಲಿ ಸ್ವಲ್ಪ ಆಧುನಿಕ ಕೃಷಿ ಪದ್ಧತಿ ಅಳವಡಿಸಿಕೊಂಡ ಸುದ್ದಿ ಹೇಳಿದರೆ, ಕೂಡಲೇ ತಾನೂ ಅವನ್ನೆಲ್ಲ ಬಹಳ ಹಿಂದೆ ಮಾಡಿ ನೋಡಿಯಾಗಿದೆ ಎನ್ನುವುದು. ಯಾರಾದರೂ ಇನ್ನೊಬ್ಬರಿಗೆ ಉಪಕಾರ ಮಾಡಿದರೆ, ತಾನು ಇಂತಹ ಹಲವು ಜನರಿಗೆ ಉಪಕಾರ ಮಾಡಿದ್ದೇನೆ ಅನ್ನುವುದು. ತನಗೆ ಗೊತ್ತಿಲ್ಲ ಎಂಬುದು ಅವನ ಬಾಯಿಯಿಂದ ಬರುತ್ತಲೇ ಇರಲಿಲ್ಲ. ಇವನ್ನೆಲ್ಲ ಕೇಳುತ್ತಿದ್ದ ಪಕ್ಕದ ಮನೆಯವ, 'ಗುರುಮನೆಯಲ್ಲಿ ಕಳವು ಆಗಿ ಹೋಗಿದೆಯಂತೆ' ಅಂತ ಹೇಳಿದ ಕೂಡಲೇ, 'ಅದು ತಾನೇ ಮಾಡಿಸಿದ್ದು' ಅಂದುಬಿಡಬೇಕೆ!

**ಶಂಕರನಾರಾಯಣ ಭಟ್**

ಕಲೆ: ಗಣೇಶ ಆಚಾರ್ಯ